ಇ) ಈ ಹುದ್ದೆಗಳನ್ನು ಭರ್ತಿ ಮಾಡುವಂತೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಮಂತ್ರಿಗಳು).—

ಅ) ಕಡಬ ಸರ್ಕಾರಿ ಪ್ರೌಢಶಾಲೆಯಲ್ಲಿ ೩ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಆ) ಯಾವ ರಕ್ಷಕೇತರ ಸಿಬ್ಬಂದಿ ಹುದ್ದೆಗಳು ಖಾಲಿ ಇರುವುದಿಲ್ಲ.

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಆದಷ್ಟು ಬೇಗನೆ ಭರ್ತಿ ಮಾಡಲಾಗುವುದು.

ಸುಳ್ಯ ತಾಲ್ಲೂಕಿನ ಲೋಕೋಪಯೋಗಿ ಇಲಾಖೆಯ ರಸ್ತೆಗೆ ಟಾರು ಹಾಕಿಸುವ ಬಗ್ಗೆ

೧೪೭೬ (೪೫೮೮) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಲೋಕೋಪಯೋಗಿ ಆಚ್ಚುಕಟ್ಟು ಪ್ರದೇಶಾಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸುಳ್ಯ ತಾಲ್ಲೂಕಿನ ಕರಿಕ್ಕಳ-ತಾಂತುಮೂರಿ ಲೋಕೋಪಯೋಗಿ ಇಲಾಖೆ ರಸ್ತೆಗೆ ಕಳೆದ ಎರಡು ವರ್ಷಗಳಿಂದ ಟಾರು ಹಾಕಿಸಲು ಮಂಜೂರಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ ಈ ಟಾರು ರಸ್ತೆ ನಿರ್ಮಾಣ ಪ್ರಕ್ರಿಯೆ ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಸಚಿವರು).—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ಸರಕಾರಿ ಪ್ರಥಮ ದರ್ಜೆ ಕಾಲೇಜನ್ನು ತೆರೆಯುವ ಬಗ್ಗೆ

೧೪೭೭ (೪೪೬೬) ಶ್ರೀ ಕೆ. ಕುಶಾಲ (ಸುಳ್ಯ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ೧೯೮೩ ರಿಂದ ಪ್ರತಿ ತಾಲ್ಲೂಕಿಗೆ ಒಂದು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ನೀಡುತ್ತೇವೆ ಎಂಬ ಭರವಸೆ ನೀಡಿರುವುದು ನಿಜವೇ ; ಇಲ್ಲಿಯವರೆಗೆ ಪ್ರಥಮ ದರ್ಜೆ ಕಾಲೇಜು ನೀಡಲಾಗಿರುವ ತಾಲ್ಲೂಕುಗಳೆಷ್ಟು ; ಹೆಸರು ಹಾಗೂ ಪೂರ್ಣ ಮಾಹಿತಿಯನ್ನು ಒದಗಿಸುವುದು?

ಆ) ಸುಳ್ಯ ತಾಲ್ಲೂಕಿನ ಬೆಳ್ಳಾರೆಗೆ ಪ್ರಥಮ ದರ್ಜೆ ಕಾಲೇಜು ಇಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಈ ವರ್ಷವಾದರೂ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ತೆರೆಯುವಂತೆ ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಡಿ. ಮಂಜುನಾಥ್ (ವಿಧ್ಯಾ ಸಚಿವರು).—

ಅ) ಹಂತ ಹಂತವಾಗಿ ಪ್ರತಿ ತಾಲ್ಲೂಕಿಗೆ ಪ್ರಥಮ ದರ್ಜೆ ಕಾಲೇಜು ನೀಡುವ ಉದ್ದೇಶ ಸರ್ಕಾರಕ್ಕಿದೆ. ೧೯೮೩-೮೪ ರಿಂದ ಪ್ರಥಮ ದರ್ಜೆ ಕಾಲೇಜು ನೀಡಲಾಗಿರುವ ತಾಲ್ಲೂಕುಗಳ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಆ) ಹೌದು.

ಇ) ೧೯೮೬-೮೭ರ ಸಾಲಿನಲ್ಲಿ ಯಾವುದೇ ಪ್ರಥಮ ದರ್ಜೆ ಕಾಲೇಜುಗಳಿಗೆ ಮಂಜೂರಾತಿ ನೀಡ ಬಾರದೆಂದು ಸರ್ಕಾರ ತೀರ್ಮಾನಿಸಿದೆ.

ಅನುಬಂಧ

೧೯೮೩-೮೪ ರಿಂದ ೧೯೮೫-೮೬ರ ವರೆಗೆ ಮಂಜೂರಾದ ಪ್ರಥಮ ದರ್ಜೆ ಕಾಲೇಜುಗಳ ವಿವರ

ಕ್ರಮ ಸಂಖ್ಯೆ	೧೯೮೩-೮೪		೧೯೮೪-೮೫		೧೯೮೫-೮೬	
	ಜಿಲ್ಲೆ	ತಾಲ್ಲೂಕು	ಜಿಲ್ಲೆ	ತಾಲ್ಲೂಕು	ಜಿಲ್ಲೆ	ತಾಲ್ಲೂಕು
೧)	ದಕ್ಷಿಣ ಕನ್ನಡ	ಬೈಂದೂರು ಕುಂದಾಪುರ	೧) ಹಾಸನ	ಬೇಲೂರು	೧) ಬೆಂಗಳೂರು	ಹೊಸಕೋಟೆ
೨)	ತುಮಕೂರು	ಗುಬ್ಬಿ	೨) ಧಾರವಾಡ	ಸವಣೂರು	೨) — ಬೆಂಗಳೂರು	ಬಿನ್ನಿಮಿಲ್ ಕ್ವಾರ್ಟರ್ಸ್
೩)	ಉತ್ತರ ಕನ್ನಡ	ಹಳಿಯಾಳ	೩) ಬೆಂಗಳೂರು	ದೊಡ್ಡಬಳ್ಳಾಪುರ	೩) ಬಳ್ಳಾರಿ	ಹಗರಿಬೊಮ್ಮನಹಳ್ಳಿ
೪)	ಚಿಕ್ಕಮಗಳೂರು	ಮೂಡಿಗೆರೆ	೪) ಹಾಸನ	ಅರಕಲಗೂಡು	೪) ಚಿಕ್ಕಮಗಳೂರು	ನರಸಿಂಹರಾಜಪುರ
೫)	ಹಾಸನ	ಸಕಲೇಶಪುರ	೫) ಬೆಂಗಳೂರು	ಮಾಗಡಿ	೫) ಚಿತ್ರದುರ್ಗ	ಮೊಳಕಾಲ್ಮೂರು
೬)	ಚಿತ್ರದುರ್ಗ	ಹೊಸದುರ್ಗ	೬) ತುಮಕೂರು	ಪಾವಗಡ	೬) ಧಾರವಾಡ	ಗಜೇಂದ್ರಗಡ, ರೋಣ
೭)	ದಕ್ಷಿಣ ಕನ್ನಡ	ಬೆಳ್ತಂಗಡಿ	೭) ಬೆಂಗಳೂರು	ಚನ್ನಪಟ್ಟಣ	೭) ಗುಲ್ಬರ್ಗ	ಸೇಡಂ
೮)	ಗುಲ್ಬರ್ಗ	ಷಹಾಪುರ	೮) ಗುಲ್ಬರ್ಗ	ಚಿತ್ತಾಪುರ	೮) ಕೋಲಾರ	ಬಂಗಾರಪೇಟೆ (ಹೆಣ್ಣು ಮಕ್ಕಳ ಕಾಲೇಜು)
			೯) ಬಳ್ಳಾರಿ	ಕೂಡ್ಲಿಗಿ	೯) ಮಂಡ್ಯ	ಶ್ರೀರಂಗಪಟ್ಟಣ
			೧೦) ಉತ್ತರ ಕನ್ನಡ	ಮುಂಡಗೋಡ	೧೦) ಮೈಸೂರು	ಹೆಗ್ಗಡದೇವನಕೋಟೆ
			೧೧) ಬೆಂಗಳೂರು	ದೇವನಹಳ್ಳಿ	೧೧) ಶಿವಮೊಗ್ಗ	ಹೊಸನಗರ
					೧೨) ತುಮಕೂರು	ಕೊರಟಗೆರೆ
					೧೩) ಉತ್ತರ ಕನ್ನಡ	ಯಲ್ಲಾಪುರ
					೧೪) ಶಿವಮೊಗ್ಗ	ಸೊರಬ
					೧೫) ಕೋಲಾರ	ಶ್ರೀನಿವಾಸಪುರ
					೧೬) ಬಳ್ಳಾರಿ	ಬಳ್ಳಾರಿ